ಶ್ರೀ ಬಿ. ಲಕ್ಕಪ್ಪ.—ಸಮಾಜದ ಮುತ್ತು ಜನರ ಕಣ್ಣು ತಪ್ಪಿಸಿ ಶಾಸಕರು ಮತ್ತು ಮಂತ್ರಿಗಳಾದ ಮೇಲೆ ಕೋಟಿಗಟ್ಟಲೆ ಹಣ ಮಾಡುತ್ತಿದ್ದಾರೆ. ಈ ಬಗ್ಗೆ ತಡೆಹಿಡಿಯುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ತರಹದ ಉತ್ತರವನ್ನು ಮುಖ್ಯಮಂತ್ರಿಗಳು ಕೊಡುತ್ತಾರೆಂದು ನಿರೀಕ್ಷೆ ಮಾಡಿರಲಿಲ್ಲ ಎಂದು ಹೇಳಿದರು. ಯಾವರೀತಿ ಪ್ರಶ್ನೆ ಕೇಳುತ್ತಾರೋ ಆ ರೀತಿಯ ಉತ್ತರ ಸಿಗುತ್ತದೆ. ಅವರ ಮನಸ್ಸಿನಲ್ಲಿರುವಂಥ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಪ್ರಶ್ನೆ ಏನು ಕೇಳಿದ್ದಾರೆ ಎಂಬುದನ್ನು ನಾನು ಮೊದಲು ಓದುತ್ತೇನೆ. ಮಂತ್ರಿಗಳಿಗೆ ಆಪ್ತ ಕಾರ್ಯದರ್ಶಿಯಾಗಿ, ಆಪ್ತ ಸಹಾಯಕರಾಗಿ ನೇಮಕವಾಗುವವರು ಅವರವರ ಆಸ್ತಿ ವಿವರವನ್ನು ನಿಯಮಿತವಾಗಿ ನೀಡಬೇಕೆಂಬ ನಿಯಮವನ್ನು ಸರ್ಕಾರದವರು ಎಲ್ಲಾ ಮಂತ್ರಿಗಳಿಗೂ ಕಳುಹಿಸಿದ್ದು ನಿಜವಲ್ಲವೇ ಎಂದು ಕೇಳಿದ್ದಾರೆ. ಎಲ್ಲ ಮಂತ್ರಿಗಳಿಗೂ ಪ್ರತ್ಯೇಕವಾಗಿ ಕಳುಹಿಸುವ ಅಗತ್ಯ ಇಲ್ಲ. ಸರ್ಕಾರಿ ನೌಕರರ ಸೇವಾ ನಿಯಮಾವಳಿಯಲ್ಲಿ ಇದು ಸ್ಪಷ್ಟವಾಗಿದೆ. ನಿಯಮಾವಳಿ ಏನಿದೆ ಎಂಬುದನ್ನು ಮಾನ್ಯ ಸದಸ್ಯರ ತಿಳಿವಳಿಕೆಗಾಗಿ ಓದುತ್ತೇನೆ,

ಕರ್ನಾಟಕ ನಾಗರೀಕ ಸೇವಾ ವರ್ತನೆ ನಿಯಮಗಳು ;—

" ಈ ಕೆಳಗೆ ನಮೂದಿಸಿರುವ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲ ನೌಕರರಿಗೂ ಅನ್ವಯಿಸುತ್ತದೆ.

೧. ಕೈಗಾರಿಕೋದ್ಯಮದಲ್ಲಿ ನೇಮಕವಾಗಿರುವವರು.

೨. ಸರ್ಕಾರಿ ಸೇವೆಯಲ್ಲಿ ಪೂರ್ಣಾವಧಿ ಸೇವೆಯಲ್ಲಿ ಇಲ್ಲದ ನೌಕರರು.

೩. ಗ್ರೂಪ್ ಡಿ ನೌಕರರಂ.

೨೩ನೇ ನಿಯಮದ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರನೂ ಸರ್ಕಾರಿ ಸೇವೆಗೆ ಸೇರಿದ ಕೂಡಲೇ ಮತ್ತು ನಂತರ ೧೨ ತಿಂಗಳಿಗೊಮ್ಮೆ ತಾನು ಮತ್ತು ತನ್ನ ಕುಟುಂಬದ ಇನ್ನಿತರ ಸದಸ್ಯರು ಹೊಂದಿರುವ ಆಸ್ತಿ ಮತ್ತು ಹಣವನ್ನು ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಸಬೇಕಾಗುತ್ತದೆ. "

ಇದು ನಿಯಮಾವಳಿಯಲ್ಲಿದೆ. ಆದ್ದರಿಂದ ಪ್ರತ್ಯೇಕವಾಗಿ ತಿಳಿಸಬೇಕಾಗಿಲ್ಲ. ಮತ್ತು ಆ ಪ್ರಕಾರ ಯಾರು ನಡೆದುಕೊಳ್ಳುವುದಿಲ್ಲವೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ.

ಮಾರ್ಕಂಡೇಯ ಕೆರೆಯ ರೀತಿಯಲ್ಲಿ ಏತ ನೀರಾವರಿ ಯೋಜನೆ.

೧೭೨೯. ಶ್ರೀ ಹೆಚ್. ಬಿ. ದ್ಯಾವರಪ್ಪ.—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಮಾರ್ಕಂಡೇಯ ಕೆರೆಯ ಪೆಮ್ಮದೊಡ್ಡಿ ಮತ್ತು ತೊರಲಕ್ಕಿ ಏತ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಲು ಉದ್ದೇಶಿಸಿದೆಯೇ ?

ಆ) ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಇದರ ಬಗ್ಗೆ ಮಾಡಿದ ಖರ್ಚೆಷ್ಟು ?

ಇ) ಮೊದಲೇ ಆಳವಡಿಸಿದ ಪಂಪುಸೆಟ್ಟುಗಳಿಗೆ ನೀರು ಪೂರೈಸಲು ಕೊಳವೆ ಬಾವಿಗಳನ್ನು ತೋಡಲು ಸರ್ಕಾರವು ನಿಶ್ಚಯಿಸಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಎರಡು ಏತ ನೀರಾವರಿ ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ.

ಆ) ಯೋಜನೆಗಳಿಗಾದ ಖರ್ಚಿನ ವಿವರ

ಹೆಸರು	ಹಿಂದಿನ ಸರ್ಕಾರ ಮಾಡಿದ ವೆಚ್ಚ	ಈಗಿನ ಸರ್ಕಾರ ಮಾಡಿದ ವೆಚ್ಚ
೧. ಪೆಮ್ಮೆದೊಡ್ಡಿ	೧,೮೫,೪೦೦	೫,೧೦೦
೨. ತೊರಲಕ್ಕಿ	೧,೬೭,೧೮೦	೪,೨೦೦

೫) ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಬಿ. ದಾಪ್ಪರಪ್ಪ —ತಮ್ಮ ಉತ್ತರದಲ್ಲಿ ಯೋಜನೆ ಪೂರ್ಣಗೊಂಡಿದೆ ಎಂದು ಹೇಳಿದ್ದೀರಿ. ಈ ವರ್ಷ ೯೫೦೦ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಏತಕ್ಕೋಸ್ಕರ ಇದನ್ನು ಖರ್ಚು ಮಾಡಿದ್ದೀರಿ. ಹೋದ ಸಾರಿ ಪ್ರಶ್ನೆ ಹಾಕಿದಾಗ ಜವಾಬು ಕೊಟ್ಟಿದ್ದೀರಿ. ಪುನಃ ರಿಪೈರ್ ಮಾಡುತ್ತೀರಾ ? ಬೋರ್ ಮಾಡುತ್ತೀರಾ ಎಂದು ಹೇಳಿದ್ದೆ. ಅದಕ್ಕೆ ಒಪ್ಪಿಕೊಂಡಿದ್ದರು. ಅಧಿಕಾರಿಗಳಿಗೂ ಬರೆದಿದ್ದೇನೆ. ಅದರ ಬಗ್ಗೆ ತನಿಖೆ ಮಾಡಿ ವರದಿ ತರಿಸಿಕೊಂಡಿದ್ದಾರೆ. ನಾಲ್ಕು ಲಕ್ಷ ರೂಪಾಯಿ ಖರ್ಚಾಗಿದ್ದರೂ ಒಂದು ಎಕರೆಗೆ ನೀರು ಕೊಟ್ಟಿಲ್ಲ. ರೈತರು ಇದರಿಂದ ಕಂಗಾಲಾಗಿದ್ದಾರೆ. ಅಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿರತಕ್ಕ ಜನರಿದ್ದಾರೆ, ಅವರಿಗೆ ನೀರು ಕೊಡುವುದಕ್ಕೆ ಹೊಸದಾಗಿ ಬೋರವೆಲ್ ಹಾಕಿ ನೀರು ಸರಬರಾಜು ಮಾಡಿ ಸಹಾಯ ಮಾಡುತ್ತೀರಾ ?

ಶ್ರೀ ಎಚ್. ಡಿ.ದೇವೇಗೌಡ —ಮಾರ್ಕಂಡೇಯ ಕೆರೆಯ ಪೆಮ್ಮೆದೊಡ್ಡಿ ಮಂತ್ತು ತೊರಲಕ್ಕಿ ವಿತ ನೀರಾವರಿ ಯೋಜನೆಗಳನ್ನು ಮಾಡುವ ನಿರ್ಣಯವನ್ನು ೧೯೭೯ರಲ್ಲಿ ಮಾಡಿದ್ದಾರೆ. ನಾಲ್ಕು ವರ್ಷದಿಂದ ಕೆರೆಗೆ ನೀರು ಬಂದಿಲ್ಲ. ಆದ್ದರಿಂದ ವಿತ ನೀರಾವರಿ ಉಪಯೋಗ ಆಗಿಲ್ಲ. ಸೆಂಟ್ರಲ್ ವಾಟರ್ ಬೋರ್ಡಿನವರು ತೊರಲಕ್ಕಿ ವಿತ ನೀರಾವರಿ ಭಾಗದಲ್ಲಿ ಸ್ವಂತ ಬಳಕೆಗಾಗಿ ಬೋರ್‌ವೆಲ್ ಹಾಕಿದ್ದಾರೆ ೧೦ ಸಾವಿರ ಗ್ಯಾಲನ್ ನೀರು ಆದರಿಂದ ಬರುತ್ತದೆಂದು ಗೊತ್ತಾಗಿದೆ. ಆ ಬಾವಿಯಿಂದ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವೇ ಎಂಬ ಪ್ರಯತ್ನ ನಡೆದಿದೆ. ಸನ್ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಮತ್ತೆ ಆ ಭಾಗದಲ್ಲಿ ಗ್ರೌಂಡ್ ವಾಟರ್ ಅವೈಲಬಿಲಿಟಿ ಇದ್ದರೆ ನೋಡಿಸುತ್ತೇನೆ. ಪ್ರತ್ಯೇಕವಾಗಿ ಎರಡು ಪ್ರಶ್ನೆ ಹಾಕಿದ್ದಾರೆ. ನೀರು ಕೊಡುವುದಕ್ಕೆ ಎಷ್ಟರವಂಟ್ಟಿಗೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

ಶಾಸಕಾಂಗ ಕಾಯ್ದೆಯನ್ನು ತರುವಲ್ಲಿ ಸರಕಾರವು ಕ್ರಮ ತೆಗೆದುಕೊಂಡ ಬಗ್ಗೆ

೧೭೮೬. ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂವಿಧಾನದಲ್ಲಿ ಖಚಿತ ಪಡಿಸಿದ ವಿವಿಧ ಮೀಸಲಾತಿಯ ಕುರಿತು ಒಂದು ಶಾಸಕಾಂಗ ಕಾಯ್ದೆಯನ್ನು ತರುವಲ್ಲಿ ಸರಕಾರವು ತೆಗೆದುಕೊಂಡ ಕ್ರಮ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮತ್ತು ಇನ್ನಿತರ ಹಿಂದುಳಿದ ವರ್ಗಗಳ (ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ) ಕಾಯಿದೆ ರಚನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ವಿ. ಎಲ್. ಪಾಟೀಲ್.—ತಪಸಿಗೆ ಹೇಳುವುದಾದರೆ ಅಸೆಂಬ್ಲಿ ಮುಂದೆ ಇದರ ಬಗ್ಗೆ ಬಿಲ್ ಬರುತ್ತದೆ.

ಶ್ರೀ ಬಿ.ಎಂ. ತಿಪ್ಪೇಸ್ವಾಮಿ,—ಸ್ವಾಮಿ, It is under active consideration ಎಂದು ಹೇಳಿದ್ದೀರಿ. ಅದು ಯಾವ ಸ್ಟೇಜಿನಲ್ಲಿದೆ ? Active consideration ಎಂದರೆ ಎಷ್ಟು ದಿವಸ ಆಗುತ್ತದೆ ? passive consive consideration ಎಂದರೆ ಎಷ್ಟು ದಿವಸ ಆಗುತ್ತದೆ ?

ಶ್ರೀ ವಿ. ಎಲ್. ಪಾಟೀಲ್,—ಕ್ಯಾಬಿನೆಟ್‌ಗೆ ಇದು ಬರುತ್ತದೆ. ನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ.